## 2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಕಡೂರು

### ಸಿ.ಸಿ. ನಂ.4181/2024

ಫಿರ್ಯಾದಿ ಃ ಪಂಚನಹಳ್ಳಿ ಪೊಲೀಸ್ ಠಾಣೆ

ವಿರುದ್ಧ

ಆರೋಪಿತರು ಃ

1. ಶ್ರೀ ಚಿಕ್ಕ ಅಲಿಯಾಸ್ ಚಿಕ್ಕಣ್ಣ ಬಿನ್ ನಾಗರಾಜು, ಸುಮಾರು 26 ವರ್ಷ ವಯಸ್ಸು, ಕೂಲಿ ಕೆಲಸ,
2. ಶ್ರೀ ನಾಗರಾಜು ಪಿ.ಸಿ ಬಿನ್ ಚಂದ್ರಪ್ಪ, ಸುಮಾರು 35 ವರ್ಷ ವಯಸ್ಸು, ವ್ಯವಸಾಯ ಮತುತ ದನದ ವ್ಯಾಪಾರ,

ಇಬ್ಬರು ವಾಸಃ ಗಾಂಧಿ ನಗರ,ಪಂಚನಹಳ್ಳಿ ಕಡೂರು ತಾಲ್ಲೂಕು.

### ದೋಷಾರೋಪಣೆ

ಶ್ರೀಮತಿ ಸವಿತರಾಣಿ ಹೆಚ್.ವಿ., ಬಿ.ಎ.ಎಲ್., ಎಲ್.ಎಲ್.ಬಿ., 2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ, ಕಡೂರು ಆದ ನಾನು ಈ ಮೂಲಕ ಕೆಳಕಂಡಂತೆ ಆಪಾದಿತರಾದ ನಿಮ್ಮಗಳ ಮೇಲೆ ಹೊರೆಸುವ ದೋಷಾರೋಪಣೆ.

ದಿನಾಂಕಃ03.08.2024 ರಂದು ರಾತ್ರಿ 7.00 ಗಂಟೆ ಸಮಯದಲ್ಲಿ ಚಿಕ್ಕಮಗಳೂರು ಜಿಲ್ಲೆಯ, ಕಡೂರು ತಾಲ್ಲೋಕಿನ ಪಂಚನಹಳ್ಳಿ ಹೋಬಳಿಯ ಪಂಚನಹಳ್ಳಿ ಗ್ರಾಮಕ್ಕೆ ಸೇರಿದ ತುಂಬಿನಕೆರೆ ಗ್ರಾಮದ ಸೇರಿದ ಸರ್ವೆ ನಂಬರ್ 98/1 ರಲ್ಲಿ, ಚಾಸಾ-1 ರವರು ತೆಂಗಿನ ತೋಟದಲ್ಲಿ ತೆರೆದ ಸಿಮೆಂಟ್ ಶೆಡ್ ನಿರ್ಮಿಸಿದ್ದು, ಅದರಲ್ಲಿ ಚಾಸಾ-1 ರವರು ಹಸುವಿನಲ್ಲಿ ಹಾಲು ಕರೆದುಕೊಂಡು ತೆರೆದ ಶೆಡ್ ನಲ್ಲಿ ಹಸು ಕಟ್ಟಿ ಬಂದಿದ್ದು, ಆರೋಪಿತರಾದ ನೀವು ಸಮಾನ ಉದ್ದೇಶದಿಂದ ರಾತ್ರಿ ವೇಳೆಯಲ್ಲಿ ಹಸುವನ್ನು ಕಳುವು ಮಾಡಿಕೊಂಡು ಹೋಗಿ ಬಿ.ಟಿ.

ಮಲ್ಲೇಮನಹಳ್ಳಿ ಗ್ರಾಮದ ಹತ್ತಿರ ಚಾಸಾ-6 ರವರ ಆಟೋದಲ್ಲಿ ತೆಗೆದುಕೊಂಡು ಹೋಗಿ ಗವಿರಂಗಸ್ವಾಮಿ ಬೆಟ್ಟದ ದನಗಳ ಸಂತೆಯಲ್ಲಿ ಚಾಸಾ-7 ರವರಿಗೆ 8,000/-ಗಳಿಗೆ ಮಾರಾಟ ಮಾಡಿರುತ್ತೀರಿ. ಆದಕಾರಣ ಆರೋಪಿತರಾದ ನೀವು ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ 303(2) ಸಹವಾಚಕ 3(5)ರ ಅಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೇಯ ಒಳಗೆ ಮಾಡಿರುವಿರಿ.

ಪ್ರಶ್ನೆಃ 1- ನಿಮ್ಮ ಮೇಲಿನ ಆಪಾದನೆಯ ಸಾರವನ್ನು ಓದಿ ವಿವರಿಸಿ ಹೇಳಿದಾಗ ನಿಮಗೆ

ಉತ್ತರಃ

ಪ್ರಶ್ನೆಃ 2- ನೀವು ನಿಮ್ಮ ತಪ್ಪನ್ನು ಒಪ್ಪಿಕೊಳ್ಳುವಿರೋ ಅಥವಾ ನಿಮ್ಮ ಪರ ಪ್ರತಿರಕ್ಷಣೆ ಇದೆಯೇ?

ಆದ್ದರಿಂದ ನೀವು ಮೇಲ್ಕಂಡ ದಂಡನೀಯ ಅಪರಾಧಗಳ ಮೇಲೆ ಈ ನ್ಯಾಯಾಲಯದಿಂದ ವಿಚಾರಣೆಗೆ ಒಳಪಡತಕ್ಕದ್ದೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ.

ದಿನಾಂಕಃ 20.12.2024

ಸಹಿ/-

**(ಶ್ರೀಮತಿ ಸವಿತರಾಣಿ ಹೆಚ್.ವಿ)**

2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು

ಮತ್ತು ಜೆಎಂಎಫ್‌ಸಿ., ಕಡೂರು.